ನುಡಿಮಲ್ಲಿಗೆ

ನೀನು ನಿನ್ನ ದೇಹದ ಮೇಲೆ ಧರಿಸಿರುವ ಆಭರಣಗಳಿಗಿಂತಲೂ
ಹೆಚ್ಚಿನದು ಮುಖದಲ್ಲಿ ಧರಿಸಿರುವ ಮಂದಹಾಸ

■ ಮೂರೋ

ಕಹಿ ಮಾತ್ರೆಗಳು

ಅನೇಕ ವಿಧದ ದಾನಗಳಲ್ಲಿ ರಕ್ತದಾನವೂ ಒಂದಾಗಿದೆ. ರಕ್ತದಾನವು ಒಂದು ಪುಣ್ಯ ಕಾರ್ಯ. ರಕ್ತ ನೀಡುವುದರಿಂದ ಮತ್ತೆ ಹೆಚ್ಚಾಗುತ್ತದೆ. ಹೇಗೆಂದರೆ ನಾವು ಕೂದಲನ್ನು ಕತ್ತರಿಸುತ್ತೇವೆ. ಅದು ಮತ್ತೆ ಬೆಳೆಯುತ್ತದೆ. ನಾವು ಉಗುರನ್ನು ಕತ್ತರಿಸುತ್ತೇವೆ, ಅದು ಮತ್ತೆ ಬೆಳೆಯುತ್ತದೆ. ಬಾವಿಯಿಂದ ನೀರು ಸೇದಿಕೊಳ್ಳುತ್ತೇವೆ, ಅದು ಮತ್ತೆ ಹೆಚ್ಚುತ್ತದೆ. ರಕ್ತ ನೀಡುವುದರಿಂದ ನಿನಗೇನೂ ಕಮ್ಮಿಯಾಗದು, ದಿಟ, ಸಾಯುತ್ತಿರುವವನಿಗೆ ಅವಶ್ಯವಾಗಿ ಹೊಸ ಜೀವನ ಸಿಗುತ್ತದೆ. ಮತ್ತೆ ಇದೂ ಸತ್ಯವೇ-ಏನೆಂದರೆ ಯಾರು ಶರೀರದ ಬಗ್ಗೆ ಅನುರಕ್ತನೋ ಅವನು ರಕ್ತವನ್ನು ಹೇಗೆ ಕೊಡಬಲ್ಲ? ರಕ್ತ-ನೀರಾಗುವ ಮೊದಲು, ಯಾರಿಗಾದರೂ ಜೀವಕೊಡು. ನದಿಯ ನೀರು ಸಮುದ್ರ ಸೇರಿ ಉಪ್ಪು ನೀರಾಗುವ ಮೊದಲು ಹೊಲಗಳಿಗೆ ಹಾಯಿಸು. ಜ್ಞಾಪಕವಿಡು-ಜೀವನಿದ್ದಾಗ ರಕ್ತದಾನ, ಹೋಗುತ್ತ-ಹೋಗುತ್ತ ದೇಹದಾನ ಹೋದ ಮೇಲೆ ನೇತ್ರದಾನ.

-ಮುನಿಶ್ರೀ ತರುಣಸಾಗರ್‌ಜೀ

ಡಿ.ವಿ.ಜಿ. ಚಿಂತನೆ–164



ನಮ್ಮ ಆಚಾರ ಸಂಪ್ರದಾಯಗಳನ್ನು ನಾವು ಸ್ವತಂತ್ರ ವಿಚಾರಕ್ಕೆ ಒಳಗಾಗಿಸಬೇಕು. ಹೊಸ ಹೊಸ ಸಂದೇಹಗಳು, ದ್ವಂದ್ವಗಳು, ಧರ್ಮ ಸಂಕಟಗಳು- ಇವು ಕಾಲಕ್ರಮದಲ್ಲಿ ಇನ್ನೂ ಹೆಚ್ಚುತ್ತವೆ ; ಒಂದಕ್ಕೆ ನಾಲ್ಕರಷ್ಟಾಗುತ್ತವೆ. ಸಾಹಿತ್ಯಕರ್ತರು ಅವರವರ ಪ್ರತಿಭಾಸಂಪತ್ತಿಗನುಸಾರವಾಗಿ ಇವುಗಳನ್ನೆಲ್ಲ ತಮ್ಮ ಗ್ರಂಥಗಳಲ್ಲಿ ಪ್ರತಿಫಲಿಸುವಂತೆ ಆಗಬೇಕು. ಹಾಗೆ ಹೊಸ ಸಂಶಯಗಳೂ, ಆಶಯಗಳೂ, ಭಾವನೆಗಳೂ, ಸಮಸ್ಯೆಗಳೂ ಸಾಹಿತ್ಯದಲ್ಲಿ ಪ್ರತಿಫಲಿಸಬೇಕಾದರೆ ದೇಶದಲ್ಲಿ ಸ್ವತಂತ್ರವಿಚಾರಬುದ್ಧಿ ಹೆಚ್ಚಬೇಕು.... ಈ ಸ್ವತಂತ್ರ ವಿಚಾರ ಬುದ್ಧಿಯಿಲ್ಲದೆ ಕಾವ್ಯವನ್ನು ಬರೆದರೆ, ಅದು ಹಳಸಲಾಗುತ್ತದೆ; ಬೆಳಗಾಗ ಮಾಡಿಟ್ಟ ಕಾಫಿಯನ್ನು ಸಂಜೆಯಲ್ಲಿ ಬಿಸಿಮಾಡಿ ಕೊಟ್ಟ ಹಾಗಾಗುತ್ತದೆ ; ಹಿಂದಿನ ರಾಮನ ವಿರಹ, ಹಿಂದಿನ ನಳನ ಪಶ್ಚಾತ್ತಾಪ, ಹಿಂದಿನ ಚಂದ್ರಮತಿಯ ಗೋಳು- ಇವನ್ನೇ ನಾವು ಬೇರೆ ಮಾತುಗಳಲ್ಲಿ ಬರೆದಂತೆ ಆಗುತ್ತದೆ.

■ ಡಿ.ವಿ.ಗುಂಡಪ್ಪ (ಕೃತಿ: ''ಜೀವನ ಸೌಂದರ್ಯ ಮತ್ತು ಸಾಹಿತ್ಯ'', 'ಡಿವಿಜಿ ಕೃತಿಶ್ರೇಣಿ-1')

ವಿವಿಧೆಡೆ ಅದ್ದೂರಿ ಕಾರ್ತಿಕೋತ್ಸವ

ಹೊನ್ನಾಳಿ

ಪಟ್ಟಣದ ಶ್ರೀ ನೀಲಕಂಠೇಶ್ವರ ಸ್ವಾಮಿ, ಶ್ರೀ ಮಾರಿಕಾಂಬಾ ದೇವಿ, ಶ್ರೀ ದುರುಗಮ್ಮ-ಮರಿಯಮ್ಮ ದೇವಿ, ದುರ್ಗಿಗುಡಿ ಕಣಗಲಗಿಡದ ಶ್ರೀ ಚೌಡೇಶ್ವರಿ ದೇವಿ, ಹೊಸಕೇರಿ ಶ್ರೀ ಚೌಡಮ್ಮ, ಗಾಳಿ ದುರುಗಮ್ಮ ದೇವಿ, ಕಲ್ಕೇರಿ ಶ್ರೀ ಮಾಯಮ್ಮ, ಕುಂಬಾರ ಬೀದಿಯ ದುರುಗಮ್ಮ ದೇವಿ, ಪೇಟೆ ಶ್ರೀ ಪಾಂಡುರಂಗ-ರುಖುಮಾಯಿ ದೇವಸ್ಥಾನ, ಶ್ರೀ ಹಳದಮ್ಮ ದೇವಿ, ಸರ್ವರ್ ಕೇರಿ ಶ್ರೀ ರೇವಣಸಿದ್ಧೇಶ್ವರ ಸ್ವಾಮಿ, ಕೊಲ್ಲಾಪುರದಮ್ಮ ಶ್ರೀ ಮಹಾಲಕ್ಷ್ಮೀ ದೇವಿ, ಒಡ್ಡಿನಕೇರಿ ಶ್ರೀ ಆಂಜನೇಯ ಸ್ವಾಮಿ ಸೇರಿದಂತೆ ಪಟ್ಟಣದ ವಿವಿಧ ದೇವಸ್ಥಾನಗಳಲ್ಲಿ ಸೋಮವಾರ ಕಾರ್ತಿಕೋತ್ಸವ ನಡೆಯಿತು.

ದೇವಸ್ಥಾನಗಳಲ್ಲಿ ದೇವಾಲಯ ಸಮಿತಿಯವರು ಬಾಳೆ ಕಂಬಗಳಿಂದ ಮಂಟಪ ನಿರ್ಮಿಸಿ ವೀಳ್ಯದೆಲೆ ಹಾಗೂ ವಿವಿಧ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ನೆರವೇರಿಸಿದರು. ಪಟ್ಟಣದ ವಿವಿಧ ಕೇರಿಯ ಮಹಿಳೆಯರು-ಮಕ್ಕಳು ಭಕ್ತಿಯಿಂದ ತಮ್ಮ ಮನೆಗಳಿಂದ ಎಣ್ಣೆ ತಂದು ದೇವಸ್ಥಾನಗಳ ಬಳಿ ದೀಪಗಳನ್ನು ಹಚ್ಚಿದರು. ಭಕ್ತರಿಗೆ ದೇವಾಲಯ ಸಮಿತಿಯವರು ಬಾಳೆಹಣ್ಣು-ಬೆಲ್ಲ, ಮಂಡಕ್ಕಿ ಫಳಾರ ವಿತರಿಸಿದರು.

ಆಯಾ ದೇವಾಲಯಗಳ ಸಮಿತಿಯ ಎಲ್ಲಾ ಪದಾಧಿಕಾರಿಗಳು-ಮುಖಂಡರು ಇದ್ದರು.

ಕ.ಕೋ.ಸೌ.ವೇ. ಪ್ರತಿಭಟನೆ

>>> 1ನೇ ಪುಟದಿಂದ...

ಅಧಿಕಾರ ಬಂದಾದ ನಂತರದ ದಿನಗಳಲ್ಲಿ ಆಹಾರ ಪದ್ಧತಿ, ಧರ್ಮದ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ಸಾಕಷ್ಟು ದಾಳಿ ನಡೆಯುತ್ತಿದೆ. ಹೀಗಾಗಿ ದೇಶದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆಯೇ ಇಲ್ಲವಾಗಿದೆ ಎಂದು ಆರೋಪಿಸಿದರು.

ಲಿಬರ್ಹಾನ್ ಆಯೋಗದ ವರದಿಯಂತೆ ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ದೇಶದ ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವೇದಿಕೆಯ ಅಧ್ಯಕ್ಷ ಇಸ್ಮಾಯಿಲ್ ದೊಡ್ಡಮನಿ, ವಿಜಯಕುಮಾರ್, ಅಬ್ದುಲ್ ಸತ್ತಾರ್, ಜೆ.ಅಮಾನುಲ್ಲಾ ಖಾನ್, ಬುಳಸಾಗರ ಸಿದ್ದರಾಮಣ್ಣ, ಶರೀಫ್, ಮೊಹಮ್ಮದ್ ಭಾಷಾ, ಕರಿಬಸಪ್ಪ, ಖಾದರ್ ಭಾಷಾ, ಜಬಿನಾ ಖಾನಂ, ಆದಿಲ್ ಖಾನ್, ಬೇ.ನಾ. ಅಣ್ಣಪ್ಪ, ಅಯಾಜ್ ಹುಸೇನ್, ಅನೀಫ್, ದಲಿತ ಮುಖಂಡರುಗಳಾದ ಹೆಗ್ಗೆರೆ ರಂಗಪ್ಪ, ಉಚ್ಚಂಗಿ ಪ್ರಸಾದ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ದಿನ ಭವಿಷ್ಯ

ದಿನಾಂಕ:07-12-2017 ಗುರುವಾರ

ತಿಥಿ: ಚೌತಿ ನಕ್ಷತ್ರ:ಪುಷ್ಯ

ಅದೃಷ್ಟ ಸಂಖ್ಯೆ: 2

ಇಂದಿನ ವಿಶೇಷ

ಮಾರ್ಗಶಿರ ಲಕ್ಷ್ಮೀವ್ರತ

ಮೇಷ : ಹೊಣೆಗಾರಿಕೆ
ವೃಷಭ : ಧಾರಾಳತನ
ಮಿಥುನ : ವಿಶ್ಲೇಷಣೆ
ಕಟಕ : ಅನಾವರಣ
ಸಿಂಹ : ಅತ್ಯಾನಂದ
ಕನ್ಯಾ : ಉಪಚಾರ ಮಾತು
ತುಲಾ :ವೃತ್ತಿಪ್ರಶಂಸೆ
ವೃಶ್ಚಿಕ : ಭರವಸೆ
ಧನಸ್ಸು : ಬಿಗುಮಾನ
ಮಕರ :ಅಪೇಕ್ಷಿತ ಕೆಲಸ
ಕುಂಭ : ಶುಭವಾರ್ತೆ
ಮೀನ : ಮಾನ್ಯತೆ

ಟೆಂಡರ್ ಅರ್ಜಿ ಆಹ್ವಾನ

ದಾವಣಗೆರೆ

ಜಿಲ್ಲೆಯ ಜಗಳೂರು ತಾಲ್ಲೂಕಿನ ದಿದ್ದಿಗೆ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪಿಠೋಪಕರಣಗಳನ್ನು ಸರಬರಾಜು ಮಾಡಲು ಅಂಗೀಕೃತ ಟೆಂಡರ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ಸರ್ಕಾರಿ ಪ್ರೌಢಶಾಲೆ ದಿದ್ದಿಗೆ ಇಲ್ಲಿ ಪಡೆಯಬಹುದಾಗಿದೆ. ಅರ್ಜಿ ಶುಲ್ಕ 250/- ರೂಗಳ ಡಿ.ಡಿಯನ್ನು ಅಧ್ಯಕ್ಷರು, ಕಾರ್ಯದರ್ಶಿಗಳು ಎಸ್.ಡಿ.ಎಂ.ಸಿ ಇವರ ಹೆಸರಿನಲ್ಲಿ ಡಿ.ಡಿ ತೆಗೆದು ಅರ್ಜಿಯೊಂದಿಗೆ ಸಲ್ಲಿಸಬಹುದಾಗಿದೆ.

ಪತ್ರಕರ್ತನ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

ದಾವಣಗೆರೆ

ಇತ್ತೀಚೆಗೆ ತುಮಕೂರಿನ ಖಾಸಗಿ ವಾಹಿನಿಯ ವರದಿಗಾರನ ಮೇಲೆ ಹಲ್ಲೆ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜಿಲ್ಲಾ ವರದಿಗಾರರ ಕೂಟದ ಪದಾಧಿಕಾರಿಗಳು, ಸದಸ್ಯರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕೂಟದ ಅಧ್ಯಕ್ಷ ಬಿ.ಎನ್.ಮಲ್ಲೇಶ, ಇತ್ತೀಚೆಗೆ ತುಮಕೂರಿನಲ್ಲಿ ಬಿ-ಟಿವಿ ವರದಿಗಾರ ವಾಗೀಶ್ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಪತ್ರಕರ್ತರ ಮೇಲೆ ಈ ರೀತಿಯ ಹಲ್ಲೆ, ದೌರ್ಜನ್ಯ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿವೆ. ಸರ್ಕಾರ ತಕ್ಷಣವೇ ದುಷ್ಕರ್ಮಿಗಳನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು. ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಬೇಕು. ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಜರುಗದಂತೆ ಸರ್ಕಾರ ಸೂಕ್ತ ಮುಂಜಾಗೃತಾ ಕ್ರಮ ಕೈಗೊಳ್ಳಬೇಕು. ಪತ್ರಕರ್ತರ ಕಾರ್ಯ ನಿರ್ವಹಣೆಗೆ ಮುಕ್ತ ಹಾಗೂ ನಿರ್ಭೀತ ವಾತಾವರಣ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೂಟದ ಪ್ರಧಾನ ಕಾರ್ಯದರ್ಶಿ ನಾಗರಾಜ ಬಡದಾಳ್, ಹಿರಿಯ ಪತ್ರಕರ್ತರಾದ ರವಿ ಆರುಂಡಿ, ಮಂಜುನಾಥ ಗೌರಕ್ಕಳವರ್, ಬಸವರಾಜ ದೊಡ್ಮನಿ, ರಾಜೇಶ್, ಬಾಲಚಂದ್ರ, ಈ. ಪವನಕುಮಾರ್, ಕಿರಣ್‌ಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ

ಹರಪನಹಳ್ಳಿ

ವಿಶ್ವರತ್ನ ಮಹಾಮಾನವತಾವಾದಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ 61 ನೇ ಮಹಾಪರಿನಿರ್ವಾಣ ದಿನವನ್ನು ಪಟ್ಟಣದ ಹೊಸಪೇಟೆ ರಸ್ತೆಯ ಜಗಜೀವನ್ ರಾಮ್ ಭವನದಲ್ಲಿ ತಾಲೂಕು ಡಾ.ಬಿ.ಆರ್.ಅಂಬೇಡ್ಕರ್ ಸಮಾಜ ಸಂಘದ ವತಿಯಿಂದ ಆಚರಣೆ ಮಾಡಲಾಯಿತು.

ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಎಸ್.ಭೀಮಪ್ಪ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ. ಪ್ರಪಂಚಕ್ಕೆ ಮಾದರಿಯಾದ ಮಹಾಪುರುಷನ ನೆನೆಯುವುದು ವಿಶೇಷ ದಿನಗಳಲ್ಲಿ ಮಾತ್ರವಲ್ಲ ಬದಲಾಗಿ ಪ್ರತಿನಿತ್ಯ ಸ್ಮರಣೆ ಮಾಡುವುದು ನಿಜವಾದ ಮನುಷ್ಯನ ಕರ್ತವ್ಯವಾಗಿದೆ ಎಂದರು.

ಇವರ ಪರಿನಿರ್ವಾಣ ದಿನದಂದು ತಾಲೂಕಿನಲ್ಲಿ ಎಲೆಮರೆಕಾಯಿಯಾಗಿರುವ ರಂಗ ಕಲಾವಿಧರನ್ನು ಮುಖ್ಯವಾಹಿನಿಗೆ ತರುವ ಸದುದ್ದೇಶ ಹಾಗೂ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿರುವ ಕಲಾವಿಧರಿಗೆ ಅನುಕೂಲವಾಗುವಂತೆ ಹೋರಾಟ ಮಾಡುವ ಹಾಗೂ ರಂಗಭೂಮಿ, ಜಾನಪದ ಕಲೆ ನಶಿಸಿಹೋಗದಂತೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಸಂಘ ನಿರ್ಧರಿಸಿದೆ. ಇದರಿಂದ ಮಹಾತ್ಮರಿಗೆ ಗೌರವ ಸೂಚಿಸಿದಂತಾಗುವುದು. ಈ ಸದುದ್ದೇಶದಿಂದ ತಾಲೂಕಿನ ಎಲ್ಲ ಕಲಾವಿಧರನ್ನು ದಿನಾಂಕ ಡಿಸೆಂಬರ್ 11 ರಂದು ಸೋಮವಾರ ಬೆಳಿಗ್ಗೆ 10.30 ಕ್ಕೆ ಬಾಬುಜಗಜೀವನ್ ರಾಮ್ ಭವನದಲ್ಲಿ ಸಭೆ ಕರೆಯಲಾಗಿದೆ. ತಾಲೂಕಿನಲ್ಲಿ ಸಂಘಟನೆಗೆ ಮುಂದಾಗುವ ಉತ್ಸಾಹಿಗಳನ್ನು ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಾಪಂ ಸದಸ್ಯ ಓ.ರಾಮಪ್ಪ, ಸಂಘದ ಕಾರ್ಯದರ್ಶಿ ಓ.ಮಹಾಂತೇಶ್, ಹಿರಿಯ ರಂಗಭೂಮಿ ಕಲಾವಿದ ಕೂಲಹಳ್ಳಿ ಷಡಾಕ್ಷರಪ್ಪ, ಆಲ್ಮರಸಿಕೆರೆ ಚನ್ನಬಸಪ್ಪ ದಳವಾಯಿ, ಬಾಗಳಿ ಬಸವರಾಜ್, ದೇವರ ತಿಮ್ಮಲಾಪುರದ ನಾಗರಾಜ್, ಚಿಗಟೇರಿ ಜಯಪ್ಪ, ಬಾಗಳಿ ವೀರಯ್ಯ, ಕೂಲಹಳ್ಳಿ ಲಕ್ಷ್ಮಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

ಉತ್ತಮ ನಡವಳಿಕೆಯಿಂದ ಜೀವನ ಸಾರ್ಥಕ

ಹರಪನಹಳ್ಳಿ-583131
ರಾಷ್ಟ್ರೀಯ ಸೇವಾ ಯೋಜನಾ ಘಟಕ
ತಾಲ್ಲೂಕು ಕಾನೂನು ಸೇವಾ ಸಮಿತಿ
ಹರಪನಹಳ್ಳಿ

ಹರಪನಹಳ್ಳಿ

ಅಕ್ಷರ ಕಲಿಕೆಯಿಂದ ಮಾತ್ರ ಸಾಧನೆಯಲ್ಲ. ಉತ್ತಮ ಗುಣ ನಡವಳಿಕೆ ಬೆಳೆಸಿಕೊಂಡರೆ ಮಾತ್ರ ಜೀವನದ ಸಾರ್ಥಕತೆ ಸಾಧ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ಪಟ್ಟಣದ ಹೆಚ್.ಪಿ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಆರೋಗ್ಯ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಬುಧವಾರ ವಿಶ್ವ ಏಡ್ಸ್ ದಿನಾಚರಣೆ ಹಾಗೂ ಅಂಗ ನ್ಯೂನ್ಯತೆ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಏಡ್ಸ್‌ನಿಂದ ನರಳುತ್ತಿರುವವರಿಗೆ ಗುಣ ಪಡಿಸುವ ಔಷಧಿಗಳ ಕೊರತೆಯಿದೆ. ಇದು ಸಾಂಕ್ರಮಿಕ ರೋಗವಲ್ಲ. ಅವರನ್ನು ದೂರ ತಳ್ಳದೇ ಪ್ರಿತಿ ಮಮತೆ ಹಾಗೂ ಮಾನಸಿಕ ಸ್ಥೈರ್ಯ ನೀಡಿ ಹೆಚ್ಚು ಸಹನುಭೂತಿಯಿಂದ ಕಾಣಬೇಕು ಎಂದರು.

ಅಪರ ಸರ್ಕಾರಿ ವಕೀಲರಾದ ಕಣಿವಿಹಳ್ಳಿ ಮಂಜುನಾಥ ಮಾತನಾಡಿ, ದೇಶದ ಸೌಭಾಗ್ಯ ಉಳಿಯಲು ಸೈನಿಕರ ಶ್ರಮಬೇಕು ಅದರಂತೆ ಮನೆಯ ಸೌಭಾಗ್ಯದಿಂದ ಇರಲು ಗೃಹಿಣಿಗೆ ಹೆಚ್ಚು ಪ್ರಾದಿನಿತ್ಯ ನೀಡಬೇಕು. ಆಧುನಿಕ ಜೀವನ ಶೈಲಿಗೆ ವಿದ್ಯ ಮುಖ್ಯವಾಗಿದೆ. ವಿಕಲಚೇತನರು ವಿವಿಧ ಕ್ಷೇತ್ರಗಳಲ್ಲೂ ತಮ್ಮ ಪ್ರತಿಭೆಯನ್ನು ಹೊರಹಾಕಲು ಸಮರ್ಥರಾಗಿದ್ದಾರೆ. ಅವರಿಗೆ ಕರುಣೆಗಿಂತ ಸಹಕಾರ ಪ್ರೋತ್ಸಹದ ಅವಶಕತೆಯಿದೆ. ಮಹಾನ ಸಾಧಕರಾದ ವಿವೇಕಾನಂದರು, ಬಸವಣ್ಣ ತಮ್ಮ 30ನೇ ವಯಸ್ಸಿನಲ್ಲಿ ಅಗಾಧ ಸಾಧನೆ ಮಾಡಿದ್ದಾರೆ ಎಂದರು.

ಆರೋಗ್ಯ ಇಲಾಖೆಯ ಅಪ್ತ ಸಮಾಲೋಚಕ ಜಿ.ಎ.ಮಲ್ಲಿಕಾರ್ಜುನ ಮಾತನಾಡಿ, ಹದಿಹರಿಯದ ಯುವ ಜನತೆಯ ಮನೋಭಾವನೆ ಬದಲಾಗಲು ಹೆಚ್ಚು ಕಾದಂಬರಿ ಹಾಗೂ ಪುಸ್ತಕಕ್ಕೆ ಮಾರು ಹೋಗಬೇಕು. ಇದರಿಂದ ಗುರಿ ಸಾಧನೆಗೆ ಅನುಕೂಲವಾಗುತ್ತದೆ. ಇವುಗಳನ್ನು ಬಿಟ್ಟು ಅಪಾಯಕರ ಸಂತೋಷಕ್ಕೆ ಬಲಿಯಾಗಬೇಡಿ. ಅಸುರಕ್ಷತೆಯ ಲೈಂಗಿಕ ಆಕರ್ಷಣೆಯಿಂದ ಜೀವನ ವ್ಯರ್ಥವಾಗುತ್ತದೆ. 5ನೇ ವಯಸ್ಸಿನಲ್ಲೇ ಕುಟುಂಬ ಸದಸ್ಯರು ಸಂವೇದನ ಶೀಲತೆಯನ್ನು ಕಲಿಸಿದರೆ ಹದಿಹರೆಯದಲ್ಲೇ ಜೀವನವನ್ನು ಕಟ್ಟಿಕೊಳ್ಳು ಯುವ ಜನತೆ ಸದೃಡರಾಗುತ್ತಾರೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಮತ್ತಿಹಳ್ಳಿ ಅಜ್ಜಣ್ಣ, ಡಾ.ರೇಣುಕಾರಾಧ್ಯ, ಹೆಚ್.ಪಿ.ಎಸ್. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ನೀಲಮ್ಮ ಹಾಗೂ ಟಿ.ಹೆಚ್.ಎಂ.ಮಹೇಶ್ ವಕೀಲರು ಮಾತನಾಡಿದರು. ಎಂ.ಮಲ್ಲಪ್ಪ,

ಉಪನ್ಯಾಸಕರಾದ ಮಂಜುನಾಥ ಮಾಳ್ಗಿ, ಕೆ.ಬಿ.ರವೀಂದ್ರ ವಕೀಲರಾದ ಡಿ.ಹನುಮಂತ, ಬಾಗಳಿ ಮಂಜುನಾಥ ಹಾಗೂ ಇತರರು ಭಾಗವಹಿಸಿದ್ದರು.

ವ್ಯಾಪಾರಿಗಳಿಗೆ ಇಜ್ಜತ್ ಕಾರ್ಡ್ ನೀಡಲು ಆಗ್ರಹ

ದಾವಣಗೆರೆ

ಪಶ್ಚಿಮ ಬಂಗಾಳ ಮಾದರಿಯಲ್ಲಿ ರೈಲ್ವೆ ಇಲಾಖೆಯಿಂದ ಸಣ್ಣಪುಟ್ಟ ವ್ಯಾಪಾರಿಗಳಿಗೆ ಇಜ್ಜತ್ ಕಾರ್ಡ್ ನೀಡುವಂತೆ ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಎಸ್.ಕೆ.ಶಾಸ್ತ್ರಿ ಒತ್ತಾಯಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಮತಾ ಬ್ಯಾನರ್ಜಿ ಕೇಂದ್ರ ರೈಲ್ವೆ ಸಚಿವರಾಗಿದ್ದ ಸಂದರ್ಭದಲ್ಲಿ ರೈಲು ಗಾಡಿಗಳಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಬಡವರಿಗೆ ಅನುಕೂಲವಾಗುವಂತೆ ಇಜ್ಜತ್ ಕಾರ್ಡ್ ವಿತರಿಸಲಾಗಿತ್ತು. ಆದರೆ ಅದು ಪಶ್ಚಿಮ ಬಂಗಾಳಕ್ಕೆ ಮಾತ್ರ ಸೀಮಿತವಾಗಿದ್ದು, ದೇಶದ ಇತರೆ ಭಾಗಗಳಿಗೆ ವಿಸ್ತರಣೆಯಾಗಿಲ್ಲ. ಇದರಿಂದಾಗಿ ರೈಲ್ವೆಯಲ್ಲಿ ವ್ಯಾಪಾರ ಮಾಡಿಕೊಂಡೇ ಜೀವನ ಮಾಡುವ ಸಾವಿರಾರು ಬಡಜನರಿಗೆ ತೊಂದರೆಯಾಗಿದೆ ಎಂದು ದೂರಿದರು.

ನೈರುತ್ಯ ರೈಲ್ವೆ ವಲಯದಲ್ಲಿ ಸುಮಾರು 15 ಸಾವಿರ ಸಣ್ಣಪುಟ್ಟ ವ್ಯಾಪಾರಿಗಳು ರೈಲು ಬೋಗಿಗಳಲ್ಲಿ ತಿಂಡಿ-ತಿನಿಸು ಮತ್ತಿತರೆ ಪದಾರ್ಥಗಳನ್ನು ಮಾರಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕಳೆದೆರೆಡು ವರ್ಷದಿಂದ ವ್ಯಾಪಾರವನ್ನು ಬೇರೊಬ್ಬರಿಗೆ ಗುತ್ತಿಗೆ ನೀಡಿದ್ದು, ಬಡಜನರು ಪುಡಿಗಾಸಿನ ಕಮೀಷನ್ನಿಗೆ ದುಡಿಯುವಂತಾಗಿದೆ.

ಸಣ್ಣಪುಟ್ಟ ಬಡ ವ್ಯಾಪಾರಿಗಳು ಸ್ವಾವಲಂಬಿಗಳಾಗಿ ಬದುಕಲು ಅನುವಾಗುವಂತೆ ಕೂಡಲೇ ಇಜ್ಜತ್ ಕಾರ್ಡ್ ವಿತರಣೆಯಾಗಬೇಕು. ಈ ಸಲುವಾಗಿ ಡಿ.13ರಂದು ಹುಬ್ಬಳ್ಳಿಯಲ್ಲಿ ವಲಯದ ಮುಖ್ಯ ವಾಣಿಜ್ಯ ವ್ಯವಸ್ಥಾಪಕರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಚಂದ್ರಶೇಖರ, ಖಲೀಲ್, ಚನ್ನಬಸಪ್ಪ, ವಿನಾಯಕ್, ಅಣ್ಣಪ್ಪ, ವೀರಭದ್ರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ದೇವನಗರಿಗೆ ಅಂಬೇಡ್ಕರ್ ಜ್ಯೋತಿಯಾತ್ರೆ ಆಗಮನ

ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ
ಜಿಲ್ಲಾ ಸಮಿತಿ, ದಾವಣಗೆರೆ.
ಅಸ್ಪೃಶ್ಯತಾ ನಿವಾರಣೆಗಾಗಿ ಅಂಬೇಡ್ಕರ್ ಜ್ಯೋತಿ ಯಾತ್ರೆ
ಹಾಗೂ ಸ್ವಚ್ಛತಾ ಮತ್ತು ಶೌಚಾಲಯಗಳ ಅರಿವು ಕಾರ್ಯಕ್ರಮ

ದಾವಣಗೆರೆ

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 61ನೇ ಮಹಾ ಪರಿನಿರ್ವಾಣ ದಿನಾಚರಣೆಯ ಪ್ರಯುಕ್ತ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ರಾಜ್ಯಾದ್ಯಂತ ಸಂಚರಿಸುತ್ತಿರುವ 'ಅಸ್ಪೃಶ್ಯತಾ ನಿವಾರಣಾ ಅಂಬೇಡ್ಕರ್ ಜ್ಯೋತಿಯಾತ್ರೆ ನಗರಕ್ಕೆ ಮಂಗಳವಾರ ಸಂಜೆ ಆಗಮಿಸಿತು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಜ್ಯೋತಿಯಾತ್ರೆಯನ್ನು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿಯ ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ನಂತರ ವಿವಿಧ ವಾದ್ಯ ಮೇಳಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಜ್ಯೋತಿಯಾತ್ರೆಯ ಮೆರವಣಿಗೆ ನಡೆಸಿ ಬೀಳ್ಕೊಟ್ಟರು

ಈ ಸಂದರ್ಭದಲ್ಲಿ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ.ಬಸವರಾಜ್, ದಾವಣಗೆರೆ ನಗರ ಸ್ಮಾರ್ಟ್ ಸಿಟಿಗೆ ತಕ್ಕಂತೆ ಅಭಿವೃದ್ಧಿಯಾಗಬೇಕು. ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪಿಸಬೇಕು, ಇದಕ್ಕಾಗಿ 25 ಲಕ್ಷ ರೂ.ಗಳನ್ನು ಪಾಲಿಕೆಯ ಅನುದಾನದಲ್ಲಿ ಮೀಸಲಿಡಬೇಕು, ನೆನೆಗುದಿಗೆ ಬಿದ್ದಿರುವ ಅಂಬೇಡ್ಕರ್ ಭವನ ನಿರ್ಮಾಣವಾಗಬೇಕು, ಬಡಜನರಿಗೆ, ನಿರಾಶ್ರಿತರಿಗೆ ಹಾಘೂ ಎಲ್ಲಾ ಜನಾಂಗದ ಬಡವರಿಗೆ ಆಶ್ರಯ ಮನೆ, ನಿವೇಶನ ನೀಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಜನಪದ ಪರಿಷತ್ ಅಧ್ಯಕ್ಷ ಡಾ.ಎಚ್.ವಿಶ್ವನಾಥ್, ಟಿ.ಶಿವಕುಮಾರ್, ಟಿ.ಎಂ. ಶಿವಯೋಗಿಸ್ವಾಮಿ, ವಿಜಯ್ ಪುಟಗನಾಳ್, ಬಿ.ಎಂ.ಈಶ್ವರ್, ಎನ್.ಮಲ್ಲೇಶ್, ಶಿವಪುತ್ರಪ್ಪ, ಪ್ರಶಾಂತ, ಹದಡಿ ಹೊನ್ನಪ್ಪ, ಬಿ.ಆರ್.ಮಂಜುನಾಥ, ಹನುಮಂತಪ್ಪ, ಹೆಗ್ಗೆರೆ ರಂಗಪ್ಪ, ಮಂಜುನಾಥ ಕೊಪ್ಪಳ, ಹೇಮಂತ, ರಮೇಶ್, ಪುಣಬಗಟ್ಟೆ ಹನುಮಂತಪ್ಪ, ರಾಜು ವ್ಯಾಸನಗೊಂಡನಹಳ್ಳಿ ಸೇರಿದಂತೆ ಹಲವರು ಹಾಜರಿದ್ದರು.

ಡಿ.10ಕ್ಕೆ ಹಿರಿಯ ವಿದ್ಯಾರ್ಥಿಗಳ ಸಂಭ್ರಮ

ದಾವಣಗೆರೆ

ಹಿರಿಯ ವಿದ್ಯಾರ್ಥಿಗಳ ಸಂಭ್ರಮ ಕಾರ್ಯಕ್ರಮ ಡಿ.10ರಂದು ಶಿವಮೊಗ್ಗ ನಗರದ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಡೆಯಲಿದೆ ಎಂದು ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಂ.ಗುರುಮೂರ್ತಿ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಯಿಂದ ಹಿರಿಯ ವಿದ್ಯಾರ್ಥಿಗಳಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆ ಜರುಗಲಿದ್ದು, ಹೆಸರು ನೋಂದಾಯಿಸಲು ಡಿಸೆಂಬರ್ 8ರೊಳಗೆ ದೂ:94480 91817(ಶೃತಿಕೀರ್ತಿ), 98450 76687(ಚಂದ್ರಪ್ಪ) ಸಂಪರ್ಕಿಸಬಹುದು. ಮಧ್ಯಾಹ್ನ 3 ಗಂಟೆಗೆ ಅನುಭವ ಹಂಚಿಕೆ, ಸಂಜೆ 4ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, 6 ಗಂಟೆಗೆ 75 ವರ್ಷ ದಾಟಿದ ಹಿರಿಯರು ಹಾಗೂ ಸಾಧಕರಿಗೆ ಸನ್ಮಾನ ಇರುತ್ತದೆ ಎಂದರು. ಕಾರ್ಯಕ್ರಮವನ್ನು ವಿಧಾನ ಪರಿಷತ್ ಸಭಾಪತಿ ಡಿ.ಹೆಚ್.ಶಂಕರಮೂರ್ತಿ ಉದ್ಘಾಟಿಸುವರು. ಶಿವಮೊಗ್ಗ ಶಾಸಕ ಕೆ.ಬಿ.ಪ್ರಸನ್ನ ಕುಮಾರ, ವಿಧಾನ ಪರಿಷತ್ ಸದಸ್ಯರಾದ ಎಂ.ಬಿ.ಭಾನುಪ್ರಕಾಶ, ಆರ್.ಪ್ರಸನ್ನ ಕುಮಾರ, ಮೇಯರ್ ಏಳುಮಲೈ, ಉಪಮೇಯರ್ ರೂಪಾ ಲಕ್ಷ್ಮಣ್, ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜೋಗನ್ ಶಂಕರ್, ಕುಲಸಚಿವ ಹೆಚ್.ಎಸ್.ಭೋಜ್ಯಾನಾಯ್ಕ, ಮಾಜಿ ಸಂಸದ ಆಯನೂರು ಮಂಜುನಾಥ, ಶಿಕ್ಷಣ ತಜ್ಞ ಡಾ.ಮಂಜುನಾಥ ಭಂಡಾರಿ, ರೈತ ಮುಖಂಡರಾದ ಕಡಿದಾಳ್ ಶಾಮಣ್ಣ, ಕೆ.ಟಿ.ಗಂಗಾಧರ ಇತರರು ಭಾಗವಹಿಸುವರು ಎಂದು ಅವರು ತಿಳಿಸಿದರು. ಸಂಘದ ಪಿ.ಜೇಸುದಾಸ್, ಎನ್.ಮಂಜುನಾಥ, ಡಾ.ನಾಗರಾಜ ಪರಿಸರ ಸುದ್ದಿಗೋಷ್ಠಿಯಲ್ಲಿದ್ದರು.

ರಾಜನಹಳ್ಳಿಯಲ್ಲಿ ಕ್ಷಯ ರೋಗ ನಿಯಂತ್ರಣ ಆಂದೋಲನ

ಹರಿಹರ

ಕ್ಷಯ ರೋಗವನ್ನು ಸಂಪೂರ್ಣವಾಗಿ ನಿವಾರಣೆ ಮಾಡುವ ದೃಷ್ಟಿಯಿಂದ ಜನವಸತಿ ಪ್ರದೇಶಗಳಲ್ಲಿ ಡಿ.4ರಿಂದ 18ರವರೆಗೆ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿ ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾ.ಪಂ. ಸದಸ್ಯರಾದ ಜಿ.ಎಂ. ಮಂಜುನಾಥ್ ಹೇಳಿದರು.

ತಾಲೂಕಿನ ರಾಜನಹಳ್ಳಿ ಗ್ರಾಮದ ಎ.ಕೆ. ಕಾಲೋನಿಯಲ್ಲಿ ಬುಧವಾರ ಕ್ಷಯ ರೋಗ ನಿಯಂತ್ರಣ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷಯ ರೋಗವು ಸೂಕ್ತ ಚಿಕಿತ್ಸೆ ನೀಡದಿದ್ದರೆ ಮಾರಣಾಂತಿಕವಾಗುತ್ತದೆ. ಎಲ್ಲಾ ಸರಕಾರಿ ಆರೋಗ್ಯ ಕೇಂದ್ರ, ಆಸ್ಪತ್ರೆಗಳಲ್ಲಿ ಈ ಕಾಯಿಲೆಗೆ ಸಕ್ಷಮ, ಸಂಪೂರ್ಣ ಹಾಗೂ ಉಚಿತ ಚಿಕಿತ್ಸೆ ಲಭ್ಯವಿದೆ ಎಂದರು.

ಜಾಗೃತಿ ಇರುವವರು ಈ ಕಾಯಿಲೆ ಬಂದಾಗ ಸೂಕ್ತ ಚಿಕಿತ್ಸೆಯನ್ನು ಪಡೆಯುತ್ತಾರೆ. ಆದರೆ ಹಲವರು ಚಿಕಿತ್ಸೆ ಪಡೆಯುವುದೆ ಇಲ್ಲ. ಆರ್ಥಿಕ ದೌರ್ಬಲ್ಯ, ಅಜ್ಞಾನ, ನಿರಾಸಕ್ತಿ ಯಿಂದಾಗಿ ಹಲವರು ಕಾಯಿಲೆಯಿಂದ ಬಳಲುತ್ತಿರು ತ್ತಾರೆ. ಇಂತಹವರು ತಮ್ಮ ಕಫದ ಮೂಲಕ ವರ್ಷದಲ್ಲಿ 10-15 ಜನರಿಗೆ ಕಾಯಿಲೆ ಹರಡುತ್ತಾರೆ.

ಅಂಗನವಾಡಿ, ಆಶಾ ಕಾರ್ಯಕರ್ತೆಯರು ತಮ್ಮ ಪ್ರದೇಶದಲ್ಲಿ ಕಾಯಿಲೆ ಪೀಡಿತರನ್ನು ಗುರುತಿಸಿ ಚಿಕಿತ್ಸೆ ಕೊಡಿಸುವ ಕಾರ್ಯ ಮಾಡುತ್ತಿದ್ದಾರೆ. ಆದರೂ ಅಪಾಯ ಪ್ರದೇಶಗಳಲ್ಲಿ ಮನೆಗಳಿಗೆ ಭೇಟಿ ನೀಡುವ ಮೂಲಕ ಕ್ಷಯ ಪ್ರಕರಣ ಅನ್ವೇಷಣೆ ಕಾರ್ಯ ಮಾಡಲಾಗುತ್ತಿದೆ ಎಂದರು.

ಆಂದೋಲನದ ಅವಧಿಯಲ್ಲಿ ಕ್ಷಯ ಕಾಯಿಲೆ ಶಂಕಿತರ ಕಫವನ್ನು ಸಂಗ್ರಹಿಸಿ, ಸೂಕ್ಷ್ಮ ದರ್ಶಕ ಕೇಂದ್ರಗಳಲ್ಲಿ ಪರೀಕ್ಷೆ ಮಾಡಲಾಗುವುದು. ಕ್ಷಯ ಕಾಯಿಲೆ ನೆಗೆಟಿವ್ ಬಂದರೆ ಸಮೀಪದ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಎಕ್‌ರೇ ತಪಾಸಣೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಕಿರಿಯ ಆರೋಗ್ಯ ಸಹಾಯಕರಾದ ಅಕ್ಷಯಕುಮಾರ್, ಎ.ಎನ್.ಎಮ್.ಗಳಾದ ಸುಧಾ.ಬಿ., ನಾಗರತ್ನ, ಆಶಾ ಕಾರ್ಯಕರ್ತೆಯರಾದ ಮಹದೇವಕ್ಕ, ಹೇಮಾವತಿ, ಗ್ರಾಮಸ್ಥರಾದ ಜಿ.ಪಿ.ಗುಡ್ಡದಯ್ಯ, ಮಲ್ಲಪ್ಪ ಮಾಕನೂರು, ಪಕ್ಕೀರಪ್ಪ, ಜಯಮ್ಮ, ಮಂಜಳಮ್ಮ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ದಲಿತರಿಗೆ ನ್ಯಾಯ ದೊರಕಿಸಿಕೊಟ್ಟ

ಅಂಬೇಡ್ಕರ್ ದಲಿತರ ಸೂರ್ಯ

ಹರಪನಹಳ್ಳಿ

ದಲಿತರು ಆರ್ಥಿಕ.ಸಮಾಜಿಕ.ರಾಜಕೀಯವಾಗಿ ಪ್ರಭಲರಾಗಲು ಪ್ರತಿಯೊಬ್ಬರೂ ಶಿಕ್ಷಣ ವಂತರಾಗಬೇಕು ಎಂದು ಮಾದಿಗ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಯರಬಾಳು ಹನುಮಂತಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ವಿಶ್ವರತ್ನ ಮಹಾಮಾನವತಾವಾದಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ 61 ನೇ ಮಹಾಪರಿನಿರ್ವಾಣ ದಿನಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ದಲಿತರಿಗೆ ನ್ಯಾಯಸಿಗಲು ಸತತ 40 ವರ್ಷಗಳ ಕಾಲ ಹೋರಾಡಿ ಅವರಿಗೆ ನ್ಯಾಯ ದೋರಕಿಸವಂತೆ ಮಾಡಿದ ಕಿರ್ತಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರಿಗೆ ಸಲ್ಲುತ್ತದೆ ಎಂದರು.

ಸಮಾಜದಲ್ಲಿ ಅತ್ಯಂತ ಹಿನಾಯ ಸ್ಥಿತಿಯಲ್ಲಿರುವ ಎಡಗೈ ಗುಂಪಿಗೆ ಬರುವ ಮಾದಿಗ ಸಮಾಜಕ್ಕೆ ಸರಿಯಾದ ನ್ಯಾಯ ಸಿಗಬೇಕಾದರೆ ಸದಾಶಿವ ಅಯೋಗದ ವರದಿ ಯಾಥವತ್ ಜಾರಿಗೆ ಯಾಗಬೇಕು ಹಾಗೂ ಶೇ.6 ಮೀಸಲಾತಿ ನಮಗೆ ಸಿಗಬೇಕು ಎಂದರು.

ಉಪನ್ಯಾಸಕ ದುರುಗೇಶ ಮಾತನಾಡಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ ಹೆಸರು ಹೇಳಿಕೋಂಡು ಬರಿ ಹಣಗಳಿಸಲು ಕೆಲ ಸಂಘಟನೆಗಳು ಹೋರಟಿದ್ದು ಇದುವರೆಗೆ ಡಾ.ಬಿ.ಆರ್.ಅಂಬೇಡ್ಕರ್‌ರವರವರನ್ನು ನಾವು ಅರ್ಥಮಾಡಿಕೋಳ್ಳವುದರಲ್ಲಿ ಎಡವುತ್ತಿದ್ದು ದಲಿತರ ಬಾಳಲ್ಲಿ ಬಂದ ಕತ್ತಲೆಯನ್ನು ಹೊಡಿಸಿ ಶಾಶ್ವತ ಬೆಳಕು ನೀಡಿದ ಮಹನ್ ಪುರಷ ಅವರು ಬರಿ ಕೆಲವೆ ಕೆಲ ವ್ಯಕ್ತಿಗಳ ಸ್ವತ್ತಲ್ಲ ಅವರು ಇಡಿ ದೇಶದ ಸ್ವತ್ತು ಎಂದರು.

ನ್ಯಾಯವಾಧಿ ಪುಣಬಗಟ್ಟಿ ಎಸ್ ನಿಂಗಪ್ಪ ಮಾತನಾಡಿ ಇತ್ತಿಚಿಗೆ ಉಡುಪಿಯಲ್ಲಿ ಜರುಗಿದ ಧರ್ಮ ಸಂಸತ್ತಿನಲ್ಲಿ ಪೇಜಾವರ ಶ್ರೀಗಳು ಸೇರಿದಂತೆ ಬೃಹತ್ ಸಂಖ್ಯೆಯಲ್ಲಿ ಸೇರಿದ ಸ್ವಾಮಿಜಿಗಳು ಸಂವಿಧಾನ ತಿದ್ದುಪಡಿ ಮಾಡಬೇಕು ಇಲ್ಲವೆ ರದ್ದು ಮಾಡಬೇಕು ಎನ್ನುಲು ಇವರ್‍ಯಾರು ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರ ರಚಿಸಿದ ಸಂವಿದಾನವನ್ನು ಇಡಿ ಪ್ರಪಂಚವೆ ಒಪ್ಪಿರವುವಾಗ ಇಂತಹ ಬಲೀಶ ಹೇಳಿಕೆ ನೀಡವುದನ್ನು ಹಾಗೂ ದಲಿತರ ಮೇಲೆ ಗಧಾಪ್ರಹಾರ ಮಾಡವುದನ್ನು ನಿಲ್ಲಿಸದಿದ್ದರೆ ದೇಶದ ತುಂಬ ಕ್ರಾಂತಿಯಾಗವುದರಲ್ಲಿ ಸಂದೇಹವಿಲ್ಲ ಎಂದರು.

ಡಿ.ಎಸ್.ಎಸ್ ಮುಖಂಡ ಕಬ್ಬಳ್ಳಿ ಮೈಲಪ್ಪ ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಈದೇಶದಲ್ಲಿ ಹುಟ್ಟದೆ ಹೋಗಿದ್ದರೆ ಶೋಷಿತರು.ಹಿಂದೂಳಿದವರಪಾಡು ನೋಡಲಿಕ್ಕೆ ಆಗುತ್ತಿರಲಿಲ್ಲ ದಲಿತರ ಸೂರ್ಯ ಡಾ.ಬಿ.ಆರ್.ಅಂಬೇಡ್ಕರ್‌ರವರು ಇಡಿ ಜಗತ್ತಿಗೆ ಹೋಸ ಕ್ರಾಂತಿ ಹುಟ್ಟು ಹಾಕಿದ ದಿಮಂತ ವ್ಯಕ್ತಿಯಾಗಿದ್ದಾರೆ ಎಂದರು.

ಕರ್ನಾಟಕ ಮಾದಿಗರ ಸಂಘದ ತಾಲ್ಲೂಕು ಅಧ್ಯಕ್ಷ ಮಲ್ಲೇಶ, ತಾಪಂ ಸದಸ್ಯ ಓ.ರಾಮಪ್ಪ, ಜುಂಜಪ್ಪ, ಉಪನ್ಯಾಸಕ ಮಂಜುನಾಥ ಮಾಳ್ಗಿ ನಾಗೇಂದ್ರಪ್ಪ, ಮಲ್ಲಿಕಾರ್ಜುನ, ಸೋಮನಾಥ ಇತರರಿದ್ದರು.